**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.120/2019**

**(ಚಾ.ಸಾ.7/ಪ್ರಾ.ಸಾ.6)**

ತಾಃ 10.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ವೈ.ಸಿ. ರಾಜಣ್ಣ |
| ತಂದೆಯ ಹೆಸರು | ಚಲ್ಲಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಚಾಲಕ |
| ವಾಸ ಸ್ಥಳ | ಯಮನೂರು, ಶ್ರೀನಿವಾಸಪುರ ತಾಲ್ಲೂಕು |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ.1 ನನ್ನ ಬಾಮೈದ ಆಗಿದ್ದು, ಚಾಸಾ.6 ನನ್ನ ಸ್ನೇಹಿತರಾಗಿರುತ್ತಾರೆ. ಸಾಕ್ಷಿದಾರರು ನಿ.ಪಿ.2 ರಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ದಿಃ13.10.2018 ರಂದು ನಾನು ಕೆಲಸ ಮುಗಿಸಿಕೊಂಡು ಸಂಜೆ 4.00 ಗಂಟೆಗೆ ಚಾಸಾ.5 ಶ್ರೀನಿವಾಸ ಇವರ ಮನೆಗೆ ಬಂದಿರುತ್ತೇನೆ. ಆ ಸಮಯದಲ್ಲಿ ಚಾಸಾ.1 ಹಾಗೂ ಆರೋಪಿತರ ನಡುವೆ

ಜಗಳ ಆಗಿದ್ದು ನಾನು ಬರುವಷ್ಟರಲ್ಲಿ ಜಗಳ ಮುಗಿದಿತ್ತು. ನಿ.ಪಿ.2 ಮಹಜರ್ ಗೆ ನಾನು ನಂದಗುಡಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಚಾಸಾ.1 ರವರು ನಂದಗುಡಿ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು ಅವರನ್ನು ನಾನು ನೋಡಲು ಆಸ್ಪತ್ರೆಗೆ ಹೋಗಿದ್ದು ಅದರ ಪಕ್ಕದಲ್ಲಿ ಇದ್ದ ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿಕೊಂಡು ನಿ.ಪಿ.2 ಕ್ಕೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿದಾರರು ಮು.ಮಾ.1 ಮತ್ತು 2 ರ ವಸ್ತುಗಳನ್ನು ನೋಡಿ ಅವುಗಳನ್ನು ಪೊಲೀಸ್ ಠಾಣೆಯಲ್ಲಿ ನೋಡಿರುವುದಾಗಿ ನುಡಿದಿರುತ್ತಾರೆ. ನಿ.ಪಿ.2 ರಲ್ಲಿ ಏನು ಬರೆದಿರುತ್ತದೆ ಎಂದು ನಾನು ಓದದೇ ಇರುವ ಕಾರಣ ತಿಳಿದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿಃ14.10.2018 ರಂದು ಪೊಲೀಸರು ದಳಸಗೆರೆ ಗ್ರಾಮದಲ್ಲಿ ಇರುವ ಸರ್ವೆ ನಂಬರ್ 171 ರಲ್ಲಿ ಇರುವ 1ನೇ ಆರೋಪಿಗೆ ಸೇರಿದ ಮನೆಯ ಮುಂಭಾಗದ ಖಾಲಿ ಜಾಗಕ್ಕೆ ಭೇಟಿ ನೀಡಿದ್ದು ಸ್ಥಳದಲ್ಲಿ ಚಾಸಾ.1 ರವರು ಹಾಜರಿದ್ದು ಆರೋಪಿತರು ಗಲಾಟೆ ಮಾಡಿದ ಸ್ಥಳವನ್ನು ಪೊಲೀಸರಿಗೆ ತೋರಿಸಿ ಆರೋಪಿತರು

ಹಲ್ಲೆ ಮಾಡಲು ಉಪಯೋಗಿಸಿದ ಮು,ಮಾ.1 ಮತ್ತು 2 ಅನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ಕೃತ್ಯ ಸ್ಥಳದಲ್ಲಿ ಬೆಳಿಗ್ಗೆ 10 ರಿಂದ 10.30 ಗಂಟೆ ಸಮಯದಲ್ಲಿ ನಿ.ಪಿ.2 ರಂತೆ ಮಹಜರ್ ಅನ್ನು ಜರುಗಿಸಿ ನನ್ನ ಸಮಕ್ಷಮ ಮು.ಮಾ.1 ಮತ್ತು 2 ಅನ್ನು ಅಮಾನತ್ತುಪಡಿಸಿಕೊಂಡು ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.2 ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಪರ ಶ್ರೀ. ಎಮ್.ಎಸ್. ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.